[C.R.P.67]

Form No.4 (civil)
Deposition Sheets
(R.P.No.57)

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ,**
**ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .**

ಸಿ.ಸಿ. ನಂ.18/2023

ಪ್ರಾ.ಸಾ.3 ಚಾ.ಸಾ.2

| | | |
|---|---|---|
| ಸಾಕ್ಷಿದಾರರ ಹೆಸರು | : | ಪುಟ್ಟೇಶ ಯಾನೆ ಪುಟ್ಟಪ್ಪ |
| ತಂದೆ ಹೆಸರು | : | ಬಸಪ್ಪ |
| ವಯಸ್ಸು | : | 40 ವರ್ಷಗಳು |
| ಉದ್ಯೋಗ | : | ಕೂಲಿ |
| ವಾಸ | : | ಕಾಕನೂರು ಗ್ರಾಮ , ಚನ್ನಗಿರಿ. |

ಪ್ರಮಾಣ ವಚನ ಬೋಧಿಸಿದ ದಿನಾಂಕಃ 12.08.2026

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ಚಾಸಾ 1 ನನ್ನ ದೊಡ್ಡಪ್ಪ. ಚಾಸಾ 3 ನನ್ನ ತಮ್ಮ ಚಾಸಾ 4 ನನ್ನ ಅಣ್ಣ. ಚಾಸಾ 12 ಮೃತ ಬೈರೇಶರವರ ಅಣ್ಣ. ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಊರಿನವರು.

2) ಸುಮಾರು 4 ವರ್ಷಗಳ ಹಿಂದೆ ಬೈರೇಶ್ ರವರಿಗೆ ಆರೋಪಿಯು ಕಾರಿನಲ್ಲಿ ಬಂದು ಸಂತೆಬೆನ್ನೂರು ರಸ್ತೆಯಲ್ಲಿ ಅಪಘಾತ ಉಂಟುಮಾಡಿರುತ್ತಾರೆ. ಸಮಯ ಆಗ ರಾತ್ರಿ 7-15 ರಿಂದ 7.30 ಗಂಟೆ ಆಗಿತ್ತು. ಬೈರೇಶ್ ರವರಿಗೆ ಅಪಘಾತವಾಗಿದ್ದಕ್ಕೆ ಸ್ಥಳದಲ್ಲಿಯೇ ಮೃತಪಟ್ಟರು. ಆತನ ತಲೆಗೆ ಪೆಟ್ಟಾಗಿತ್ತು. ಬೈರೇಶರವರು ಮೋಟಾರ್ ಬೈಕಿನಲ್ಲಿ ಹೋಗುತ್ತಿದ್ದರು. ಅಪಘಾತಕ್ಕೀಡಾದ ಕಾರು ಮತ್ತು ಮೋಟಾರ್ ಬೈಕ್ ನ ಸಂಖ್ಯೆಗಳು ನನಗೆ ಗೊತ್ತಿಲ್ಲ. ಸದರಿ ವಾಹನಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಆ ಸಮಯದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸಾಕ್ಷಿಯು ನಿಪಿ6 ಫೋಟೋ ದಲ್ಲಿರುವ ಮೋಟರ್ ಬೈಕ್ ಮತ್ತು ಕಾರನ್ನು ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ
ಸಹಾಯಕ ಸರ್ಕಾರಿ

ಅಭಿಯಾಇಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿರುತ್ತಾರೆ. ಆಲಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕಃ 01.06.2022 ರಂದು ಸಂಜೆ 7.30 ರ ಸಮಯದಲ್ಲಿ ನಾನು ಮತುತ ನನ್ನ ತಮ್ಮ ಚಾಸಾ 3 ರವರ ಕೂಲಿ ಕೆಲಸ ಮುಗಿಸಿಕೊಂಡು ಕೆಪಿಎಂ ಮಹೇಶರವರ ಕ್ರಶರ್ ಮುಂಭಾಗದಲ್ಲಿ ಹಾದುಹೋಗಿರುವ ಕಾಕನೂರು ಸಂತೆಬೆನ್ನೂರು ಎಸ್ ಹೆಚ್ 76 ರಸ್ತೆಯಲ್ಲಿ ನಡೆದುಕೊಂಡು ಬರುತ್ತಿದ್ದಾಗ ಮೃತ ಬೈರೇಶಿಯು ನೋಂದಣಿ ಸಂಃ ಇಲ್ಲದ ಹೊಸ ಬೈಕನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದ ವೇಳೆಯಲ್ಲಿ ಆರೋಪಿಯು ಕಎ 17 ಎಂ ಎ 3854 ನೆ ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಯಾವುದೋ ವಾಹನವನ್ನು ಓವರ್ ಟೇಕ್ ಮಾಡಲುಹೋಗಿ ನಿಯಂತ್ರಣ ತಪ್ಪಿ ಬೈರೇಶರವರ ಬೈಕಿಗೆ ಅಪಘಾತ ಉಂಟು ಮಾಡಿರುತ್ತಾರೆ ಎಂದರೆ ಸರಿ . ಸದರಿ ಅಪಘಾತದಿಂದ ಬೈರೇಶಿ ಸ್ಥಳದಲೇ ಮೃತಪಟ್ಟಿದ್ದು ಆ ವಿಚಾರವನ್ನು ನಾನು ಚಾಸಾ 12 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ ಎಂದರೆ ಸರಿ . ಸದರಿ ಕಾರಿನಲ್ಲಿ ಚಾಸಾ 8 ರವರು ಇದ್ದು ಅವರಿಗೂ ಸಣ್ಣಪುಟ್ಟ ಗಾಯಗಳು ಆಗಿತ್ತು ಎಂದರೆ ಸರಿ . ಬೈರೇಶ್ ರವರು ಚಲಾಯಿಸುತ್ತಿದ್ದ ಬೈಕ್ ನಂಬರ್ ಕೆಎ 17 ಹೆಚ್ ಕೆ 3216 ಆಗಿತ್ತು ಎಂದು ನಾನು ತಿಳಿದುಕೊಂಡಿದ್ದೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಗೈರು ಹಾಜರಾಗಿದು , ಸದರಿ ವಕೀಲರ ಕಿರಿಯ ವಕೀಲರ ಕೋರಿಕೆ ಮೇರೆಗೆ ಪಾಟಿ ಸವಾಲಿಗೆ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯ ಮೂಲಕ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**sd/-**

**02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಚನ್ನಗಿರಿ.**